ಶ್ರೀಕೃಷ್ಣನು "ನನ್ನ ಭಕ್ತನಾಗು. ನನ್ನನ್ನು ಸೇರಲು ಸಾಧನವಾದ ಬುದ್ಧಿಯೋಗವನ್ನು ನಿನಗೆ ದಯಪಾಲಿಸುತ್ತೇನೆ" ಎನ್ನುತ್ತಾನೆ.

ಆದರೆ ನಮ್ಮೆಲ್ಲ ಸಾಧನೆಗಳೂ ಭಗವಂತನ ಅನುಗ್ರಹಕ್ಕೆ ನಿರ್ಬಂಧಗಳಾಗುವುದಿಲ್ಲ. **'ಯಮೈವೇಷ ವೃಣುತೇ ತೇನ ಲಭ್ಯಃ'**– ಆತ್ಮವು ತಾನು ಇಚ್ಛಿಸಿದವರಿಗೆ ಮಾತ್ರ ಲಭ್ಯವಾಗುವುದು ಎಂದು ಕಠೋಪನಿಷತ್ತು ಹೇಳುತ್ತದೆ. ಇದರಿಂದ ಭಗವದನುಗ್ರಹವು ಸ್ವತಂತ್ರವಾದುದು ಮತ್ತು ಭಗವಂತನ ಸ್ವಂತ ಇಚ್ಛೆಯಿಂದಲೇ ಹರಿದು ಬರುವಂತಹುದು ಎನ್ನುವುದು ನಮಗೆ ತಿಳಿದುಬರುತ್ತದೆ. ಹೀಗಾಗಿ ಸಾಧಕನಿಗೆ ಇರುವುದು ಎರಡೇ ಆಯ್ಕೆಗಳು: **ಅವಿರತ ಪ್ರಾಮಾಣಿಕ ಪ್ರಯತ್ನ ಮತ್ತು ಭಗವದಿಚ್ಛೆಗೆ ಶರಣಾಗುವುದು.**

ಶರಣಾಗತಿಯು ಆಧ್ಯಾತ್ಮಿಕ ಸಾಧನೆಯ ಮಾರ್ಗದ ಕೊನೆಯಲ್ಲಿ ಬರುವ ಅತ್ಯಂತ ಪರಿಪಕ್ವ ಮಾನಸಿಕ ಸ್ಥಿತಿ. ಇದರಲ್ಲಿ ಪ್ರಾಪಂಚಿಕ ಅಸ್ತಿತ್ವವು ನಿರರ್ಥಕವೆಂಬ ಅರಿವಿನ ಅನಾವರಣ ಮತ್ತು ಪ್ರಪಂಚಾತೀತ ಅನಂತ ತತ್ತ್ವಕ್ಕೆ ಸಾಂತವಾದ ಪ್ರಾಪಂಚಿಕತೆಯು ಸೋಲನ್ನಪ್ಪುವ ಎರಡು ಪ್ರಕ್ರಿಯೆಗಳನ್ನು ಜೀವಿಯ ಮನಸ್ಸಿನಲ್ಲಿ ನಾವು ಗುರುತಿಸಬಹುದು. ಹೀಗೆ ಶರಣಾಗತಿಯೆನ್ನುವುದು ಪ್ರಾಪಂಚಿಕತೆಯ ಬಗ್ಗೆ ಭ್ರಮಾನಿರಸನ ಮತ್ತು ವಾಸ್ತವಿಕತೆಯ ಒಪ್ಪಿಗೆಗಳ ಸಂಕೇತವಾಗಿದೆ. ಭಗವಂತನಿಗೆ ಶರಣಾಗುವುದೆಂದರೆ, ನಾವು ಇದುವರೆಗೂ ತಾಳಿದ್ದ ಅಹಂಕಾರ ಮತ್ತು ಕರ್ತೃತ್ವಭಾವನೆಯ ನಾಶ ಮತ್ತು ತನ್ನ ಸ್ವಂತ ಇಚ್ಛೆಯನ್ನು ಭಗವದಿಚ್ಛೆಯಲ್ಲಿ ವಿಲೀನಗೊಳಿಸುವುದೇ ಆಗಿದೆ. ಒಟ್ಟಿನಲ್ಲಿ ಇದು ಅಸತ್ಯದ ಮೇಲಿನ ಸತ್ಯದ ವಿಜಯ ಮತ್ತು ಭ್ರಮೆಯ ಜಡ ಜಗತ್ತಿನ ಅಂಧಕಾರವನ್ನು ಕಳೆಯುವ ಚೈತನ್ಯ ಜ್ಞಾನೋದಯವೇ ಆಗಿದೆ.

## ಉಪಸಂಹಾರ

ನಾವು ಜಗತ್ತನ್ನು ನೋಡುವಷ್ಟು ನೋಡಿಬಿಟ್ಟಿದ್ದೇವೆ. ನಮ್ಮ ಅನುಭವದಲ್ಲಿ ಬಹು ಕಹಿಯನ್ನುಂಡಿದ್ದೇವೆ. ಆದರೂ ಈ ಕ್ಷುದ್ರ ಬಾಳಿಗೆ ಅಂಟಿಕೊಂಡು, ಇಲ್ಲದ ಸುಖವನ್ನು ಮತ್ತಷ್ಟು ಈಂಟುವ ಆಸೆ ನಮ್ಮಲ್ಲಿ ಕುಂದದೆ, ಇನ್ನೂ ಅಧಿಕವಾಗುತ್ತಲೇ ಹೋಗುತ್ತಿದೆ. ಇದನ್ನೇ ಮಾಯೆ ಎನ್ನುವುದು. ಮಾಯೆಯ ಹಂದರ ಅತಿ ಸಂಕೀರ್ಣವಾದುದು; ಬಹಳ ಜಟಿಲವಾದುದು.

**ಈಶ್ವರಾನುಗ್ರಹಾದೇವ ಪುಂಸಾಂ ಅದ್ವೈತವಾಸನಾ** – ಭಗವದನುಗ್ರಹದಿಂದಲೇ, ವ್ಯಕ್ತಿಯಲ್ಲಿ ಅದ್ವೈತ ಭಾವ ಮೂಡಲು ಸಾಧ್ಯ. ಆದ್ದರಿಂದ, ನಮ್ಮ ಕಾಯ, ಮನಸ್ಸು, ಬುದ್ಧಿಗಳನ್ನು ಭಗವಂತನಿಗೆ ಸಮರ್ಪಿಸಿ, ಭಗವದಾರಾಧನಾ ಬುದ್ಧಿಯಿಂದ ನಮ್ಮ ಕರ್ಮಗಳನ್ನು ಮಾಡುತ್ತ, ಸಾಧ್ಯವಾದಷ್ಟು ಭಗವಚ್ಚಿಂತನೆಯಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳುವುದೇ ನಾವು ಮಾಡಬಹುದಾದ, ಮಾಡಬೇಕಾದ ಆದ್ಯ ಕರ್ತವ್ಯ.

---

## ದಿವ್ಯಸ್ಮೃತಿಪ್ರಭ

### ಸಾವನ್ನು ಸ್ವಾಗತಿಸಿದ ಸಂನ್ಯಾಸಿಗಳು

ಸ್ವಾಮಿ ಸಂತೋಷಾನಂದಜಿ ಅವರು ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದ ಗೌರವಾನ್ವಿತ ಸಂನ್ಯಾಸಿಗಳು. ಅವರು ರಾಮಕೃಷ್ಣ ಮಹಾಸಂಘವು ಕೊಲ್ಕತೆಯಲ್ಲಿ ನಡೆಸುತ್ತಿದ್ದ ಒಂದು ಕಾಲೇಜಿನ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಅಲ್ಲಿ ಬಹಳಷ್ಟು ವಿದ್ಯಾರ್ಥಿಗಳಿಗೆ ಉಚಿತ ವಸತಿ ಮತ್ತು ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಿದ್ದರು. ಅವರಿಗೆ ೭೫ ವರ್ಷ ವಯಸ್ಸಾಗಿತ್ತು. ಹಲವಾರು ದೈಹಿಕ ತೊಂದರೆಗಳಿಂದ ಅವರು ಬಳಲುತ್ತಿದ್ದರು; ಶಸ್ತ್ರ ಚಿಕಿತ್ಸೆಯೂ ಆಗಿತ್ತು. ಆದರೂ ಅವರು ಸೇವಾ ಕಾರ್ಯವನ್ನು ಮಾಡುವುದನ್ನು ನಿಲ್ಲಿಸಿರಲಿಲ್ಲ. ಒಂದು ದಿನ ಅವರಿಗೆ ಹೃದಯಾಘಾತವಾಯಿತು. ತಮ್ಮ ಸಂಸ್ಥೆಯಲ್ಲಿದ್ದ ಎಲ್ಲ ಸಾಧು ಬ್ರಹ್ಮಚಾರಿಗಳನ್ನು ಕರೆದು ಅವರು ಹೇಳಿದರು: "ಇಂದು ನಾನು ಪ್ರಾಣ ಬಿಡುವವನಿದ್ದೇನೆ. ಆದುದರಿಂದ ನಮ್ಮ ವಿದ್ಯಾರ್ಥಿಗಳಿಗೆಲ್ಲ ಬೇಗನೆ ಊಟ ಬಡಿಸಿಬಿಡಿ. ಅವರ ಊಟಕ್ಕೆ ಮುಂಚೆಯೇ ನನ್ನ ಜೀವ ಹೋದರೆ, ಅವರೆಲ್ಲ ಕಷ್ಟ ಪಡಬೇಕಾಗುತ್ತದೆ, ಪಾಪ." ಅವರ ಆದೇಶವನ್ನು ಒಡನೆಯೇ ಪಾಲಿಸಲಾಯಿತು. ವೈದ್ಯರೂ ಅವರನ್ನು ಪರೀಕ್ಷಿಸಿ, ಹತ್ತಿರದಲ್ಲಿಯೇ ಕುಳಿತರು. ಆಗ ಅವರು ತಮ್ಮ ಸುತ್ತ ನೆರೆದಿರುವವರಿಗೆಲ್ಲ ಹೇಳಿದರು: "ಇದು ತುಂಬ ಕುತೂಹಲಕಾರಿ ಗಳಿಗೆ. ಸಾವಿನ ಗಳಿಗೆ ಎನ್ನುವುದರ ಬಗ್ಗೆ ಕೇಳಿದ್ದೆ. ಆದರೆ ಅದು ಹೇಗಿರುತ್ತದೆ ಎಂದು ತಿಳಿದಿರಲಿಲ್ಲ. ಈಗ ನಾನು ಅದನ್ನು ಅನುಭವಿಸುತ್ತಿದ್ದೇನೆ." ತಮ್ಮ ದೇಹಕ್ಕೆ ಏನಾಗುತ್ತಿದೆ ಎನ್ನುವುದನ್ನು ಗಮನಿಸುತ್ತಿರುವ ಬೇರಾವುದೋ ವ್ಯಕ್ತಿಯಂತೆ ಅವರು ಮಾತನಾಡುತ್ತಿದ್ದರು! ನಂತರ ಎರಡು ಮೂರು ಬಾರಿ ಶ್ರೀರಾಮಕೃಷ್ಣರ ಪವಿತ್ರನಾಮವನ್ನು ಉಚ್ಚರಿಸಿ, ಪ್ರಾಣಬಿಟ್ಟರು. ಆಗ ಅವರ ಮುಖದಲ್ಲಿ ಮಂದಹಾಸ ಲಾಸ್ಯವಾಡುತ್ತಿತ್ತು.

ಸ್ವಾಮಿ ಪುರುಷಾತ್ಮಾನಂದಜಿ ಎನ್ನುವ ಸ್ವಾಮಿಗಳು ಶ್ರೀಮಾತೆಯವರ ಮತ್ತೊಬ್ಬ ಶಿಷ್ಯರು. ಅಸ್ಸಾಂ ರಾಜ್ಯದ ಸಿಲ್‌ಚಾರ್ ಎಂಬಲ್ಲಿರುವ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಆಗ ಅವರಿಗೆ ೬೭ ವರ್ಷ ವಯಸ್ಸಾಗಿತ್ತು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ವೈದ್ಯಕೀಯ ತಪಾಸಣೆ ಮಾಡಿಸಿದಾಗ, ಅದು ಕರುಳಿನ ಕ್ಯಾನ್ಸರ್ ಎಂದು ಗೊತ್ತಾಯಿತು. ಅವರನ್ನು ಕೊಲ್ಕತೆಯ 'ಪ್ರೆಸಿಡೆನ್ಸಿ ಆಸ್ಪತ್ರೆ'ಯಲ್ಲಿ ಸೇರಿಸಲಾಯಿತು. ಅವರ ಜೊತೆಗೆ, ಅವರಿದ್ದ ಜನರಲ್ ವಾರ್ಡಿನಲ್ಲಿ, ಇನ್ನೂ ಹಲವಾರು ರೋಗಿಗಳು ಇದ್ದರು. ಸ್ವಾಮೀಜಿ ಕೆಲವು ತಿಂಗಳುಗಳ ಕಾಲ ಅಲ್ಲ ಚಿಕಿತ್ಸೆಗಾಗಿ ಇರಬೇಕಾಯಿತು. ಒಂದು ದಿನ ಸಂಜೆ, ಮಲಗಿದ್ದವರು, ಹಾಸಿಗೆಯಲ್ಲಿಯೇ ಮೇಲೆದ್ದು ಕುಳಿತು, ಶ್ರೀರಾಮಕೃಷ್ಣರ ಪವಿತ್ರ ನಾಮಸ್ಮರಣೆ ಮಾಡಲು ಆರಂಭಿಸಿದರು. ಸ್ವಲ್ಪ ಸಮಯದ ನಂತರ ಯಾರನ್ನೋ ಉದ್ದೇಶಿಸಿ ಮಾತನಾಡಲಾರಂಭಿಸಿದರು: "ಓ, ಶ್ರೀಮಾತೆಯವರೇ? ನೀವೇ ಬಂದಿರಾ? ಸ್ವಲ್ಪ ತಡೆಯಿರಿ, ನಾನೂ ಬರುತ್ತೇನೆ." ನಂತರ ಆ ವಾರ್ಡಿನಲ್ಲಿದ್ದ ಇತರ ರೋಗಿಗಳನ್ನು ಉದ್ದೇಶಿಸಿ ಹೇಳಿದರು: "ಸಹೋದರರೇ, ನೀವೆಲ್ಲ ಎದ್ದಿದ್ದೀರೇನು? ನನ್ನ ಸಮಯ ಬಂತು. ನಾನು ಹೋಗುತ್ತಿದ್ದೇನೆ." ಹೀಗೆ ಹೇಳುತ್ತ, ಶಾಂತವಾಗಿ ತಮ್ಮ ಹಾಸಿಗೆಯ ಮೇಲೆ ಮಲಗಿಕೊಂಡವರು, ಮತ್ತೆ ಮೇಲೇಳಲೇ ಇಲ್ಲ.

(ಮುಂದಿನ ತಿಂಗಳು: ಮತ್ತಷ್ಟು ನೆನಪುಗಳು)

(ಸಂಗ್ರಹ: ಸ್ವಾಮಿ ರಾಘವೇಶಾನಂದ)